ಕೊಡಗು ಜಿಲ್ಲೆಯ ಪಾಲೂರು ಹರಿಶ್ಚಂದ್ರ ದೇವರ ದೇವಾಲಯದ ಕಟ್ಟಡ ನಾಶ

281(741) - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಪಾಲೂರು ಹರಿಶ್ಚಂದ್ರ ದೇವರ ಕಟ್ಟಡ ಹಾಗೂ ವಿಗ್ರಹವನ್ನು ವಿರೂಪಗೊಳಿಸಿ ಹಾಳು ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ದ್ವಂಸ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆಯೇ; ಈ ನಿಟ್ಟಿನಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ.

ಇ) ಇದರ ಆರೋಪಿಗಳು ಯಾರು; ಇಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಹೌದು.

ಆ) ಈ ಸಂಬಂಧದಲ್ಲಿ ಒಂದು ಪ್ರಕರಣವನ್ನು ದಾಖಲಿಸಲಾಗಿದ್ದು 4 ಜನರನ್ನು ಬಂಧಿಸಲಾಗಿರುತ್ತದೆ.

ಇ) ಪಿರ್ಯಾದಿನ ಪ್ರಕಾರ 12 ಅಶ್ರಪ್ ಅಲಿ, (2) ಅಬ್ದುಲ್ ರೆಹಮಾನ್, (3) ಮಾಹಿದು (4) ಹಂಸ, (5) ಹ್ಯಾರಿಸ್, (6) ಅಹಮದ್ ಮತ್ತು (7) ಬಷಿರ್ ಇವರುಗಳು ಆರೋಪಿಗಳಾಗಿರುತ್ತಾರೆ. ಇವರ ವಿರುದ್ಧ ಕಲಂ:454, 457, 380, 427, 153 (ಎ) ಜೊತೆಗೆ 149 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ.

ರಾಜ್ಯದಲ್ಲಿ ಕೆರೆ ಕಾಯಕ ಯೋಜನೆ

282(122) - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆರೆ ಕಾಯಕ ಯೋಜನೆಯಲ್ಲಿ ಒಟ್ಟು ಎಷ್ಟು ಕೆರೆಗಳ ಕಾಮಗಾರಿಯನ್ನು ಮಂಜೂರು ಮಾಡಲಾಗಿದೆ? ಈಗಾಗಲೇ ಪೂರ್ಣವಾಗಿರುವ ಕಾಮಗಾರಿಗಳೆಷ್ಟು? ಆರಂಭವೇ ಆಗದಿರುವ ಕಾಮಗಾರಿಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಈ ಯೋಜನೆಯಲ್ಲಿ ಮಂಜೂರಾಗಿರುವ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಈ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ? ಈ ವರೆಗೆ ಇವರಿಗೆ ಪಾವತಿ ಮಾಡಿದ ಹಣ ಎಷ್ಟು?